ಸಾಕ್ಷಿಯನ್ನು ದಿ: 09.12.2024 ರಂದು ಪುನಃ ಕರೆಸಿ ಪ್ರಮಾಣ ಮಾಡಿಸಲಾಯಿತು. ಪಿ.ಡಬ್ಲ್ಯೂ-1

**ಪಾಟೀ ಸವಾಲುಃ- ಪ್ರತಿವಾದಿಗಳ ಪರ ವಕೀಲರಿಂದ:-**

1. ನಾನು ಪಿ.ಯು.ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ನಾನು 25 ವರ್ಷಗಳಿಂದ ಆರ್ಟಿಸ್ಟ್ ಆಗಿ ಕೆಲಸ ಮಾಡುತ್ತಿದ್ದೇನೆ. ಪ್ರತಿವಾದಿಗಳು ನನಗೆ 20 ವರ್ಷಗಳಿಂದ ಪರಿಚಯವಿರುತ್ತಾನೆ. 1 ನೇ ಪ್ರತಿವಾದಿಯ ಗಂಡ ಬದುಕಿರುತ್ತಾರೆಂದರೆ ಸರಿ. ಪ್ರತಿವಾದಿ ಗಂಡ ಯಾವ ಕೆಲಸ ಮಾಡುತ್ತಾರೆಂದು ನನಗೆ ಗೊತ್ತಿಲ್ಲ. ಪ್ರತಿವಾದಿಗಳು ಯಾವುದೇ ಕೆಲಸ ಮಾಡುವುದಿಲ್ಲ. 1 ನೇ ಪ್ರತಿವಾದಿ ಗಂಡ ಅರಣ್ಯ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಗಳು ಗಾರ್ಮೆಂಟ್ಸ್ ಕೆಲಸಕ್ಕೆ ಹೋಗುತ್ತಾರೆಂದರೆ ಸರಿಯಲ್ಲ. ನಾನು ಮೂಲತಃ ಹರಪ್ಪನಹಳ್ಳಿ ಗ್ರಾಮ, ನಾಗಮಂಗಲ ತಾಲ್ಲೂಕಿನವನು, ಸುಮಾರು 20 ವರ್ಷಗಳಿಂದ ಮಳವಳ್ಳಿಯಲ್ಲಿಯೇ ನೆಲೆಸಿರುತ್ತೇನೆ. ನಾನು ಮದುವೆಯಾದಾಗಿನಿಂದ ಮಳವಳ್ಳಿಯಲ್ಲಿ ಬಾಡಿಗೆ ಮನೆಯಲ್ಲಿ ವಾಸವಾಗಿರುತ್ತೇನೆ. ನಮ್ಮ ಕುಟುಂಬದಲ್ಲಿ ನಾನು, ನನ್ನ ಹೆಂಡತಿ ಮತ್ತು ನನ್ನ ಮಗಳು ವಾಸವಿರುತ್ತೇವೆ. ನಮ್ಮ ಕುಟುಂಬದಲ್ಲಿ ನಾನು ಒಬ್ಬನೇ ದುಡಿಯುತ್ತೇನೆಂದರೆ ಸರಿ. ನನ್ನ ಹೆಂಡತಿ ಅಂಗವಿಕಲೆ ಎಂದರೆ ಸರಿ. ನನ್ನ ಹೆಂಡತಿ ಚಿಕಿತ್ಸೆಗೆ ಹಣ ಖರ್ಚಾಗುತ್ತದೆ ಎಂದರೆ ಸಾಕ್ಷಿಯು ಅವರಿಗೆ ಅನೋಗ್ಯವಿರುವುದಿಲ್ಲ, ಆದರೆ ಅವರ ಕಾಲು ಸ್ವಾಧೀನವಿಲ್ಲ. ನಾನು ಬಿ.ಪಿ.ಎಲ್ ಕಾ ರ್ಡ್ ಹೊಂದಿರುತ್ತೇನೆ. ನಾನು ತಿಂಗಳಿಗೆ ರೂ.2500/- ಬಾಡಿಗೆ ಕಟ್ಟುತ್ತೇನೆ. ನಾನು ತಿಂಗಳಿಗೆ 15 - 20 ದಿನ ಆರ್ಟಿಸ್ಟ್ ಆಗಿ ಕೆಲಸ ಮಾಡುತ್ತೇನೆ, ಉಳಿಕೆ ದಿನಗಳಲ್ಲಿ ಮೈಸೂರಿನ ಜಿ.ಎಸ್.ಟಿ ಕಛೇರಿಯಲ್ಲಿ ಸೆಕ್ಯೂರಿಟಿಯಾಗಿ ಕೆಲಸ ಮಾಡುತ್ತೇನೆ. ಸೆಕ್ಯೂರಿಟಿಯಾಗಿ ಕೆಲಸ ಮಾಡುವ ಬಗ್ಗೆ ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿಲ್ಲ. ನಾನು ತಿಂಗಳಿಗೆ ರೂ.35,000/- ಸಂಪಾದನೆ ಮಾಡುತ್ತೇನೆ. ನಾನು ತಿಂಗಳಿಗೆ ಖರ್ಚೆಲ್ಲಾ ಕಳೆದು ರೂ.20,000/- ಉಳಿಸುತ್ತೇನೆ.

2. ಪ್ರತಿವಾದಿಗಳು ನನ್ನ ಹೆಂಡತಿಯ ಸಂಬಂಧಿಕರಾಗಿರುತ್ತಾರೆ. ಪ್ರತಿವಾದಿಗಳು ಒಂದು ತಿಂಗಳ ಹಿಂದೆ 2 ಲಕ್ಷ ಹಣ ಬೇಕೆಂದು ಕೇಳಿದ್ದರು. ಸಾಕ್ಷಿದಾರರ ಸಮಕ್ಷಮ ರೂ.1,50,000/- ಪ್ರತಿವಾದಿಗಳಿಗೆ ಕೊಟ್ಟಿರುತ್ತೇನೆ. ಹಣ ಕೊಡುವಾಗ ನನ್ನ ಹೆಂಡತಿಯು ಸಹ ಇದ್ದರು. ಹಣವನ್ನು ಸಬ್ ರಿಜಿಸ್ಟ್ರಾರ್ ಕಛೇರಿ ಬಳಿ ಕೊಟ್ಟಿರುತ್ತೇನೆ. ಸಾಕ್ಷಿದಾರರಾದ ಸಿಕ್ರೇಶ್ ಮತ್ತು ಮರಿಸ್ವಾಮಿ ನನ್ನ ಸಂಬಂಧಿಕರು ಎಂದರೆ ಸಾಕ್ಷಿಯು ನಮ್ಮ ಕುಲದ ಯಜಮಾನರು ಎಂದು ನುಡಿಯುತ್ತಾರೆ. ನಿಪಿ.1 ಮತ್ತು 2 ನ್ನು ಪ್ರತಿವಾದಿಗಳೇ ತೆಗೆದುಕೊಂಡು ಬಂದಿದ್ದರು. ಪ್ರತಿವಾದಿಗಳು ಕನ್ನಡದಲ್ಲಿ ಸಹಿ ಮಾಡಿರುತ್ತಾರೆ. ಪ್ರತಿವಾದಿಗಳ ಸಹಿಗಳು ನಿಪಿ.1 ಮತ್ತು 2 ರಲ್ಲಿ ವ್ಯತ್ಯಾಸವಾಗಿ ಕಾಣುತ್ತವೆ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರೇ ಹಾಗೇ ಸಹಿ ಮಾಡಿರುತ್ತೇವೆಂದು ನುಡಿಯುತ್ತಾರೆ. ಪ್ರತಿವಾದ ಪತ್ರದಲ್ಲಿರುವ

ಪ್ರತಿವಾದಿಗಳ ಸಹಿಯನ್ನು ತೋರಿಸಿ ಸದರಿ ಸಹಿಗಳನ್ನು ಪ್ರತಿವಾದಿಗಳೇ ಮಾಡಿರುತ್ತಾರೆಂದರೆ ಸರಿ. ಸಾಕ್ಷಿ ಮುಂದುವರೆದು ಸಾಲ ಪಡೆಯುವಾಗ ಕನ್ನಡದಲ್ಲಿ ಸಹಿ ಮಾಡಿ ಪಡೆದುಕೊಂಡಿರುತ್ತಾರೆ, ಆದರೆ ಪ್ರತಿವಾದ ಪತ್ರದಲ್ಲಿ ಇಂಗ್ಲಿಷ್ ನಲ್ಲಿ ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ. ಪ್ರತಿವಾದಿಗಳು ಇಂಗ್ಲಿಷ್ ಭಾಷೆಯಲ್ಲಿ ಮಾತ್ರ ಸಹಿ ಮಾಡುತ್ತಾರೆಂದರೆ ಗೊತ್ತಿಲ್ಲ. ಸಾಕ್ಷಿ ಮುಂದುವೆದು ಸಾಲ ಪಡೆಯುವಾಗ ಕನ್ನಡದಲ್ಲಿ ಸಹಿ ಮಾಡಿರುತ್ತಾರೆಂದು ನುಡಿಯುತ್ತಾರೆ.

3. ನನಗೂ ಮತ್ತು ಪ್ರತಿವಾದಿಗಳಿಗೂ ಆಗಾಗ ಜಗಳವಾಗುತ್ತಿತ್ತು ಎಂದರೆ ಸರಿಯಲ್ಲ. ದಿಃ 27.06.2023 ರಂದು ನಾನು ಪ್ರತಿವಾದಿ 2 ರವರಿಗೆ ಕಿರುಕುಳ ಕೊಟ್ಟ ಕಾರಣ ಆತ್ಮಹತ್ಯೆಗೆ ಪ್ರಯತ್ನ ಮಾಡಿರುತ್ತಾರೆಂದರೆ ಸರಿಯಲ್ಲ.2 ನೇ ಪ್ರತಿವಾದಿ ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳು ನನ್ನ ವಿರುದ್ಧ ಪೋಲಿಸರಿಗೆ ದೂರನ್ನು ಸಹ ಕೊಟ್ಟಿರುತ್ತಾರೆಂದರೆ ಸರಿಯಲ್ಲ. ಪೋಲೀಸರು ನಮ್ಮ ಮಧ್ಯೆ ರಾಜಿ ಸಂಧಾನ ಮಾಡಿ ಕಳುಹಿಸಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆಕೊಡುವ ಉದ್ದೇದದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ರೆವಿನ್ಯೂ ಸ್ಟಾಂಪನ್ನು ಮಾರಾಟ ಮಾಡುವುದನ್ನು ಸ್ಥಗಿತಗೊಳಿಸಿರುತ್ತಾರೆಂದರೆ ಸರಿಯಲ್ಲ. ಯಾವುದೇ ಸಾಲ ಪಡೆಯಬೇಕಾದರೆ ಚೆಕ್ಕನ್ನು ನೀಡಿ ಸಾಲ ಪಡೆಯುತ್ತಾರೆಂದರೆ ಸಾಕ್ಷಿಯು ನಮ್ಮ ಬಳಿ ಚೆಕ್ಕು ಇರುವುದಿಲ್ಲ ಎಂದು ಪ್ರಾಮಿಸರಿ ಪತ್ರ ಬರೆದುಕೊಟ್ಟಿರುತ್ತಾರೆಂದರೆ ಸರಿಯಲ್ಲ. ಸಾಲವನ್ನು ಈ ಸ್ಟಾಂಪ್ ನಲ್ಲಿ ಬರೆದುಕೊಟ್ಟು ಪಡೆಯುತ್ತಾರೆಂದರೆ ಸರಿ. ಸಾಲ ಪಾಡೆದುಕೊಂಡ ನಂತರ ಅದನ್ನು ನೋಂದಣಿ ಕಛೇರಿಯಲ್ಲಿ ಅದನ್ನು ನೋಂದಾಯಿಸಿಕೊಳ್ಳುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ಸತೊಂದರೆ ಕೊಡಲು ಪ್ರನೋಟನ್ನು ಸೃಷ್ಠಿ ಮಾಡಿ ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ಪ್ರತಿವಾದಿಗಳಿಗಂದ ಅಕ್ರಮ ಲಾಭ ಪಡೆಯಲು ಈ ಸುಳ್ಳು ದಾವೆ ಸಲ್ಲಿಸಿರುತ್ತೇನೆಂದರೆ ಸರಿಯಲ್ಲ. ರೆವಿನ್ಯ್ಯೂ ಸ್ಟಾಂಪ್ ಬಳಸಿ ಮಾಡಿದ ವ್ಯವಹಾರವು ಅಕ್ರಮವಾಗಿರುತ್ತದೆ ಎಂದರೆ ಗೊತ್ತಿಲ್ಲ. ನಾನು ಸುಳ್ಳು ದಾವೆ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ</u>**

(ನನ್ನ ಉಕ್ತಲೇಖನದ ಮೂಲಕ ಸಾಕ್ಷಿಯ ಹೇಳಿಕೆಯನ್ನು ಬಹಿರಂಗ ನ್ಯಾಯಾಲಯದಲ್ಲಿ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇ.

ಪ್ರಧಾನ ಸಿ.ಜೆ. ಮತ್ತು ಜೆ.ಎಂಎಫ್.ಸಿ
ಮಳವಳ್ಳಿ